ಸಾಕ್ಷಿಯ ಹೆಸರುಃ ಕಾಶೀಗೌಡ (ಒಂದನೇ ವಾದಿ)

ದಿನಾಂಕಃ **01-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ.ಜಿ ವಕೀಲರಿಂದಃ**

1) ದಿಃ 05-04-1989 ರಂದು 2 ಮತ್ತು 3 ನೇ ವಾದಿಗಳು ವೇಂಕಟ್ ರಾಮೇಗೌಡರಿಂದ ದಾವಾ ಸ್ವತ್ತನ್ನು ಖರೀದಿ ಮಾಡಿದ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಇದರ ಮೂಲ ಪ್ರತಿಯನ್ನು ಕೆ.ಆರ್.ನಗರ ಸಿವಿಲ್ ನ್ಯಾಯಾಲಯ ಓ.ಎಸ್ ನಂ. 290/1990 ರಲ್ಲಿ ಸಲ್ಲಿಸಲಾಗಿದೆ. ಸದರಿ ದೃಡೀಕೃತ ಪ್ರತಿಯನ್ನು ಪ್ರತಿವಾದಿ ಪರ ವಕೀಲರ ಪರ ಒಳಪಟ್ಟು ಮತ್ತು ರುಜುವಾತಿಗೆ ಒಳಪಟ್ಟು ನಿಪಿ 01 ಎಂದು ಗುರುತಿಸಲಾಯಿತು.

2) ಹುಣಸೂರಿನಲ್ಲಿ ಹಿರಿಯ ಸಿವಿಲ್ ನ್ಯಾಯಾಲಯದ ಆರ್ ಎ. ನಂ. 11/1994 ರಲ್ಲಿನ ತೀರ್ಪಿನ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ನಿಪಿ 02 ಎಂದು ಗುರುತಿಸಲಾಯಿತು.

3) ದಾವಾ ಸ್ವತ್ತಿಗೆ ಸಂಬಂಧಪಟ್ಟ 1988-89 ಗೆ ಸಂಬಂಧಿಸಿದ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ ನಿಪಿ 03 ಎಂದು ಗುರುತಿಸಲಾಯಿತು.

4) ಹೊಸ ಅಗ್ರಹಾರ ಗ್ರಾಮ ಪಂಚಾಯತಿಯವರು ನೀಡಿದ ಪಂಚಾಯತಿಯ ಠರಾವುನ ದೃಡೀಕೃತ ಪ್ರತಿಯನ್ನು ನಿಪಿ 04 ಎಂದು ಗುರುತಿಸಲಾಯಿತು.

5 ) ಹೊಸ ಅಗ್ರಹಾರ ಗ್ರಾಮ ಪಂಚಾಯತಿಯವರು ನೀಡಿದ ಮನೆ ಕಟ್ಟುವ ಲೈಸ್ಸನ್ಸ್ ದೃಡೀಕೃತ ಪ್ರತಿಯನ್ನು ನಿಪಿ 05 ಎಂದು ಗುರುತಿಸಲಾಯಿತು.

6) ಮೂರು ಸಾಮಾನ್ಯ ರಶೀತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 6 ರಿಂದ 8 ಎಂದು ಗುರುತಿಸಲಾಯಿತು. ನಿಪಿ-06 ದೃಡೀಕೃತ ಪ್ರತಿಯಾಗಿದೆ.

7) ಕೆ.ಆರ್.ನಗರ ಸಿವಿಲ್ ನ್ಯಾಯಾಲಯ ಓ.ಎಸ್ ನಂ. 376/2015 ರಲ್ಲಿ ಆದೇಶ ಪುಟದ ದೃಡೀಕೃತ ಪ್ರತಿಯನ್ನು ನಿಪಿ 09 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆ ಮೂಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.